**ದಿನಾಂಕ 10.06.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿ**ವಾದಿ ಪರ AP ವಕೀಲರಿಂದ

ಈ ದಾವೆಯನ್ನು ಹನುಮವ್ವ ಮತ್ತು ಮಲ್ಲಣ್ಣ ದಾಖಲು ಮಾಡಿರುತ್ತಾರೆ. ವಾದಿಗಳು ಅವರ ಅಣ್ಣ ತಮ್ಮಂದಿರ ವಿರುದ್ಧ ದಾವೆ ಸಲ್ಲಿಸಿದ್ದು ಅವರಲ್ಲಿ ಗಂಗಣ್ಣ ಮಾತ್ರ ಹೆಸರು ಗೊತ್ತು ಉಳಿದವರ ಹೆಸರು ನನಗೆ ಗೊತ್ತಿಲ್ಲ. 2 ನೇ ವಾದಿ 1 ನೇ ವಾದಿಯ ಮಗನಾಗಿರುತ್ತಾನೆ. 1 ನೇ ವಾದಿ ಗಂಡನ ಹೆಸರು ದುರುಗಪ್ಪ. ದುರುಗಪ್ಪನ ತಂದೆ ಹೆಸರು ಅಮರಪ್ಪ ಇರುತ್ತದೆ.

ಅಮರಪ್ಪನಿಗೆ 4 ಜನ ಮಕ್ಕಳು ಇರುತ್ತಾರೆ. ಅವರುಗಳಲ್ಲಿ ದುರುಗಪ್ಪ ಮತ್ತು ಗಂಗಣ್ಣ ಇಬ್ಬರ ಹೆಸರು ಗೊತ್ತಿರುತ್ತದೆ. ಇನ್ನುಳಿದ ಇಬ್ಬರ ಹೆಸರು ಗೊತ್ತಿಲ್ಲ. ದುರುಗಪ್ಪನಿಗೆ ಎಷ್ಟು ಜನ ಸಹೋದರಿಯರು ಇರುತ್ತಾರೆ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ದುರುಗಪ್ಪನಿಗೆ ಸಹೋದರರು ಇದ್ದ ಬಗ್ಗೆ ನಮೂದು ಮಾಡಿರುತ್ತೇನೆ ಸಹೋದರಿಯರು ಇದ್ದ ಬಗ್ಗೆ ನಮೂದು ಮಾಡಿಲ್ಲ. ವಾದಿ ತನ್ನ ಗಂಡನ ಭಾಗದ ಜಮೀನಿಗಾಗಿ ದಾವೆ ಸಲ್ಲಿಸಿರುತ್ತಾಳೆ. ವಾದಿಗಳು ವಂದಲಿ ಗ್ರಾಮದಲ್ಲಿ

ದುಡಿದು ತಿನ್ನಲು ಬಂದು ನೆಲೆಸಿದ್ದರಿಂದ ನನಗೆ ಪರಿಚಯ ಇರುತ್ತಾರೆ. ದುರುಗಪ್ಪನನ್ನು ನಾನು ನೋಡಿರುತ್ತೇನೆ. ದುರುಗಪ್ಪನ ಕುಟುಂಬಕ್ಕೆ ಎಷ್ಟು ಜಮೀನುಗಳು ಇವೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ದುರುಗಪ್ಪನ ಕುಟುಂಬಕ್ಕೆ ಜಮೀನುಗಳು ಇದ್ದು ಅವುಗಳನ್ನು ಸಹೋದರರಿಗೆ ದುಡಿದು ತಿನ್ನಲು ಬಿಟ್ಟು ನಾನು ಈಗ ದುಡಿದು ತಿನ್ನಲು ವಂದಲಿ ಗ್ರಾಮಕ್ಕೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ದುರುಗಪ್ಪನ ಕುಟುಂಬದ 5 ಜಮೀನುಗಳ ಸ.ನಂ. ಮತ್ತು ಕ್ಷೇತ್ರ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ದಾವ ಜಮೀನುಗಳ ಸ.ನಂ. ಮತ್ತು ಕ್ಷೇತ್ರ ನಮೂದು ಮಾಡಿಲ್ಲ. ದುರುಗಪ್ಪ ವಂದಲಿ ಗ್ರಾಮಕ್ಕೆ ದುಡಿದು ತಿನ್ನಲು ಬಂದಿರುವ ವಿಚಾರ ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ಬರೆದ ಬಗ್ಗೆ ನನಗೆ ಗೊತ್ತಿಲ್ಲ. ದುರುಗಪ್ಪನ ಸಹೋದರಿಯರ ಕುರಿತು ದುರುಗಪ್ಪ ನನಗೆ ಹೇಳಿಲ್ಲ. ದುರುಗಪ್ಪನಿಗೆ 3 ಸಹೋದರಿಯರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದುರುಗಪ್ಪ ವಂದಲಿ ಗ್ರಾಮಕ್ಕೆ ದುಡಿದು ತಿನ್ನಲು ಬಂದಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದುರುಗಪ್ಪ ಮತ್ತು ಆತನ ಹೆಂಡತಿ ಮಕ್ಕಳು ಎಂದಿಗೂ ವಂದಲಿ ಗ್ರಾಮಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ದುರುಗಪ್ಪ ಸ.ನಂ.12 ರಲ್ಲಿ ತನ್ನ ಭಾಗದ ಜಮೀನನ್ನು ಮಲ್ಲಪ್ಪ ತಂದೆ ಶಿವಪ್ಪ ಇವರಿಗೆ ಮಾರಾಟ ಮಾಡಿ ಹೋಗಿರುತ್ತಾನೆ ಎಂದರೆ ಸರಿಯಲ್ಲ. ದುರುಗಪ್ಪ ಜೀವಂತ ಇದ್ದಾಗ ಸಹೋದರರ ನಡುವೆ ವಿಭಾಗ ಆಗಿರುತ್ತದೆ ಎಂದರೆ ಸರಿಯಲ್ಲ. ದುರುಗಪ್ಪ ಭಾಗದಲ್ಲಿ ತನ್ನ ಭಾಗದ ಜಮೀನನ್ನು ಪಡೆದುಕೊಂಡಿದ್ದು ಅದನ್ನು ಆತನ ಮಾರಾಟ ಮಾಡಿದ್ದು ಈಗ ಆತನ ಹೆಂಡತಿ ಭಾಗಕ್ಕಾಗಿ ಸುಳ್ಳು ದಾವೆ ಸಲ್ಲಿಸಿರುತ್ತಾಳೆ ಎಂದರೆ ಸರಿಯಲ್ಲ. ನನಗೆ ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಮತ್ತು ಆಸ್ತಿಗಳ ಕುರಿತು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಪ್ರಮಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.